ರಾಧಮ್ಮ: 'ನಿಮ್ಮ ಮಗ ತುಂಬಾ ದಡ್ಡ ಕಣ್ರೀ.'

ಗುಂಡಮ್ಮ: 'ನೀವು ಅದನ್ನು ಹೇಗೆ ಹೇಳುವಿರಿ?'

ರಾಧಮ್ಮ: 'ನಿಮ್ಮ ಮಗನ ಉತ್ತರಗಳನ್ನು ಕಾಪಿ ಹೊಡೆದ ನನ್ನ ಮಗ ಪರೀಕ್ಷೆಯಲ್ಲಿ ಫೇಲಾಗಿದ್ದಾನೆ.'

★★★




ರೋಗಿ: 'ಸಿಸ್ಟರ್ ಅನಾಹುತ ಆಗಿದೆ. ನೀವು ನನ್ನ ಬಾಯ್ಲಲಿಟ್ಟಿದ ಥರ್ಮಾಮೀಟರ್ ನುಂಗಿಬಿಟ್ಟಿದೇನೆ.'

ಸಿಸ್ಟರ್: ಚಿಂತಿಸಬೇಡಿ! ನಮ್ಮಾಸ್ಪತ್ರೇಲಿ ಬೇಕಾದಷ್ಟು ಥರ್ಮಾಮೀಟರ್‌ಗಳು ಇವೆ.'

★★★

ನರ್ಸ್: 'ನಿಮ್ಮ ಬಾಯನ್ನು ಇನ್ನೂ ಸ್ವಲ್ಪ ಅಗಲವಾಗಿ ತೆಗೀರಿ.'

ರೋಗಿ: 'ಇದಕ್ಕಿಂತ ಅಗಲವಾಗಿ ತೆರೆದರೆ ನನ್ನ ಬಾಯಿ ಹರಿದುಹೋಗುತ್ತದೆ.'

ನರ್ಸ್: 'ಏನೇ ಆದರೂ ಸರಿ! ನನ್ನ ಟಾರ್ಚ್ ಹೊರಗೆ ತೆಗೀಬೇಕಲ್ಲ.'

**(ಸಂ) ಮಂಜುನಾಥ್, ಬೆಂಗಳೂರು**

ಕಿಟ್ಟು: ಸರ್ ಸ್ವಾತಂತ್ರ್ಯ ಹಾಗೂ ಮುಕ್ತಿಗೆ ಇರುವ ವ್ಯತ್ಯಾಸವೇನು?

ಶಿಕ್ಷಕರು: ನಿನ್ನ ಮಡದಿ ತವರಿಗೆ ಹೋದರೆ ಆಗ ನಿನಗೆ ಸ್ವಾತಂತ್ರ್ಯ, ನಿನ್ನ ಮಡದಿ ತೀರಿಕೊಂಡರೆ ನಿನಗೆ ಮುಕ್ತಿ.

★★★

ಅವನು: ಇವನನ್ನು ಬಂಧೀಖಾನೆ ಮಂತ್ರಿ ಮಾಡಲು ಅರ್ಹತೆ ಆದ್ರೂ ಏನು?

ಇವನು: ಆತ ಜೀವನದ ಅರ್ಧಭಾಗ ಬಂದೀಖಾನೆ ಒಳಗೆ ಕಳೆದಿದ್ದಾರಂತೆ, ಸಾಕಲ್ಲವೇ ಅರ್ಹತೆ?

**(ಸಂ) ಜಗದೀಶ ಎಂ. ಸಂಗಣ್ಣವರ**





